

ಎಡದಿಂದ ಬಲಕ್ಕೆ :

1. ಪದ್ಧತಿಯಂತೆ ಅಲ್ಲಿ ಆತನದೇ ಪ್ರಭುತ್ವ (4)
3. ಮೂರೆಣಿಸುವುದರೊಳಗೇ ನಡೆದುಹೋಯಿತು ಕೊಲೆ ! (3)
4. ಜಗಿಯುತ್ತ, ಜಗಿಯುತ್ತಲೇ ಹೀಗೂ ಹಾರುವುದೇ ? (3)
6. ಅವನಂತೆ ಇನ್ನಾರೂ ಇಲ್ಲದಂತೆ ಅದ್ವಿತೀಯ (4)
8. ಮೂರ್ಖರಿಗೆ ತಕ್ಕದ್ದಲ್ಲ ಬಿಡಿ, ಈ ರತ್ನ (4)
10. ಶ್ರೇಷ್ಠ ನಾವಿಕನ ನಿಯಂತ್ರಣದಲ್ಲಿ ಹೊಸ ಹಡಗು (4)
12. ಪಕ್ಷಪಾತಿಯಂತೆ ಹೌದೇ ದೇವತೆಗಳ ಒಡೆಯ ? (4)
16. ಜ್ವರ ನಿವಾರಣೆಯಾಗುವ ವೇಳೆಗೆ ರಾತ್ರಿ ಆಗಿತ್ತು (3)
17. ವ್ಯಥೆಯ ಕತೆ ಹೇಳುವ ಪದ್ಯ ಹೀಗೊಂದು (3)
18. ಸುಂದರಾಕಾರದೊಡನೆ ಗೋಚರಿಸಿದ ಚಂದ್ರ (4)

ಮೇಲಿಂದ ಕೆಳಕ್ಕೆ :

1. ಅಣ್ಣನ ಮಾತೆಂದರೆ ಆಜ್ಞೆಯೇ ಸರಿ (3)
2. ಜಯಿಸುತ್ತಲೇ ಇರಬೇಕೆಂಬ ದುರಾಸೆಯನ್ನು ದೂರ ಮಾಡು (3)
3. ಮಾಲೀಕನ ಮನೆಯ ಸುತ್ತ ಬರೀ ಕಸ, ಕೊಳಕು (3)
5. ತತ್ವಗಳ ತಾತ್ಪರ್ಯ ತಿಳಿಸಬಲ್ಲವರಿಗೆ ಈಗ ಭಾರೀ ಕೊರತೆ (3)
6. ಅಂಬಿಗನ ಮನದ ತುಂಬ ವೃತ್ತಿಯ ಬಗ್ಗೆ ಬಹಳ ಗೌರವ (4)
7. ಗೆಳೆತನಕ್ಕೆ ಯತ್ನಿಸಿದ್ದಕ್ಕೆ ಬರೀ ನಿಂದನೆ (4)
8. ಮಹಾನ್ ಹಾನಿಯಾಗುವುದನ್ನು ತಪ್ಪಿಸಿದ ಶ್ರೇಷ್ಠ ಮನುಷ್ಯ (4)
9. ತರ ತರ ನಡುಗುತ್ತಿರುವವರದೇ ಒಂದು ಬೇರೆ ದರ್ಜೆ (4)
11. ಕಾರಿನ ಕಾರ್ಖಾನೆಯಲ್ಲಿ ಆತ ಕೆಲಸಗಾರ (3)
13. ಮತ್ತೆ ಕ್ಷಾಮ ಬರದಂತೆ ಯೋಜಿಸಲು ವಿಶೇಷ ಯೋಗ್ಯತೆ (3)
14. ಸುಮ್ಮಸುಮ್ಮನೇ ಆಕೆಗೆ ಸದಾ ಕೋಪ (3)
15. ಮರ್ಕಟದ ಕಣ್ಣಿಗೆ ಬಿತ್ತು ನೋಡಿ, ಭಾರೀ ಮೊಸಳೆ (3)

## 21-09-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅವಾಂತರ 3. ನಿರಭ್ರ 4. ಕ್ಷಮಿಸು 6. ಕಕವಕ 7. ಪಾಲಕ 9. ಅರುಹು 11. ರಮಣಿ 13. ಮಲೆಪು 15. ಅಂತರ್ಧಾನ 17. ನಸೀಬು
8. ವರುಗ ( ಗರುವ=ಗರ್ವ ಹಿಂದು ಮುಂದು) 19. ಜನ್ಮಭೂಮಿ

ಮೇಲಿಂದ ಕೆಳಕ್ಕೆ:

1. ಅಭ್ರಕ 2. ರಕ್ಷಕ 3. ನಿರ್ಮಲ 5. ಸುಮಾರು 7. ಪಾಮರ 8. ಕರುಣೆ 9. ಅಧಮ 10. ಹುರುಪು 12. ಮರ್ದನ 14. ಲೆಕ್ಕಿಗ 15. ಅಂಬುಜ 16. ನವಮಿ

# ಜೇನು ನೊಣ: ಎಷ್ಟು ವಿಧ?

ಜೇನು ನೊಣ ಅದೊಂದು ಕೀಟ. ಮಧುರ ಜೇನಿಗೂ, ಕುಟುಕುವ ಮುಳ್ಳಿಗೂ ಈ ಕೀಟ ಸುಪ್ರಸಿದ್ಧ. ಅವಕ್ಕಿಂತ ಹೆಚ್ಚಾಗಿ ಹೇರಳ ಬಗೆಗಳ ಹೂ ಗಿಡಗಳ ಪರಾಗ ಸ್ಪರ್ಶದಲ್ಲಿ (ಚಿತ್ರ1) ಅದರದು ಅತ್ಯಂತ ಮಹತ್ವದ ಪಾತ್ರ. ಜೇನಿನ ಉತ್ಪಾದನೆ ಮತ್ತು ಕೃಷಿ ಬೆಳೆಗಳ ಪರಾಗ ಸ್ಪರ್ಶ ಇವೆರಡನ್ನೂ ಸೇರಿಸಿ ಜಗದಾದ್ಯಂತ ಜೇನು ನೊಣಗಳಿಂದ ಮನುಷ್ಯರಿಗೆ ಲಭಿಸುತ್ತಿರುವ ವಾಣಿಜ್ಯ ಪ್ರಯೋಜನಗಳ ಒಟ್ಟು ಮೌಲ್ಯ ಪ್ರತಿ ವರ್ಷ ಸಾವಿರಾರು ಕೋಟಿ ರೂ ಗಳನ್ನು ಮೀರುತ್ತದೆ !

ಜೇನು ನೊಣಗಳ ವೈವಿಧ್ಯ ನಂಬಲಸದಳ. ಧರೆಯಲ್ಲಿ ಈಗ್ಗೆ 34 ದಶಲಕ್ಷ ವರ್ಷಗಳಿಂದ ನೆಲೆಸಿರುವ ಈ ಕೀಟಗಳು ನೂರಾರು ವಂಶಗಳ ಸಾವಿರಾರು ಪ್ರಭೇದಗಳಾಗಿ ವಿಕಸನಗೊಂಡಿವೆ. ಈ ವರೆಗೆ ಪತ್ತೆಯಾಗಿರುವಂತೆ ಜೇನು ನೊಣಗಳಲ್ಲಿ ಸಮೀಪ ಇಪ್ಪತ್ತು ಸಾವಿರ ಪ್ರಭೇದಗಳಿವೆ: ಹನೀ ಬೀ, ಬಂಬಲ್ ಬೀ, ಮೇಸಾನ್ ಬೀ, ಕಾರ್ಪೆಂಟರ್ ಬೀ, ಲೀಫ್ ಕಟರ್ ಬೀ, ಬ್ಲೂ ಬೆರೀ ಬೀ, ಸ್ಕ್ವಾಶ್ ಬೀ, ಸ್ವೆಟ್ ಬೀ, .... ಇತ್ಯಾದಿ.




ಆದರೆ, ವಿಸ್ಮಯ ಏನೆಂದರೆ, ಜೇನು ನೊಣದ ವಿಧಗಳು ಇಷ್ಟೊಂದು ಇದ್ದರೂ ಎಲ್ಲ ಪ್ರಭೇದಗಳೂ ಭಾರೀ ಸಂಖ್ಯೆಯಲ್ಲಿ ಗುಂಪು ಜೀವನ ನಡೆಸುವುದಿಲ್ಲ; ಎಲ್ಲ ಪ್ರಭೇದಗಳೂ ಒಂದು 'ರಾಣಿ'ಯ ನೇತೃತ್ವದಲ್ಲಿ, ಮೇಣದ ಬಹು ಕೊಠಡಿಗಳ ಜೇನು ಹುಟ್ಟು ನಿರ್ಮಿಸಿ, ಮಕರಂದ ಸಂಗ್ರಹಿಸಿ, ಜೇನನ್ನಾಗಿ ಪರಿವರ್ತಿಸಿ ಗೂಡಿನಲ್ಲಿ ಸಂಗ್ರಹಿಸುವುದಿಲ್ಲ. ಅಂತಹ ಜೀವನ ಕ್ರಮವನ್ನು ಹೊಂದಿರುವ ಜೇನು ನೊಣ ಪ್ರಭೇದಗಳು ಏಳೇ ಏಳು : ಜೈಂಟ್ ಹನೀ ಬೀ, ವೆಸ್ಟರ್ನ್ ಹನೀ ಬೀ, ಏಷಿಯನ್ ಹನೀ ಬೀ ( ಚಿತ್ರ3 ರಲ್ಲಿ ಕ್ರಮವಾಗಿ ಮೇಲಿಂದ ಕೆಳಕ್ಕೆ ), ಕೋಶ್ವೆವ್ನಿಕೋವ್ಸ್ ಹನೀ ಬೀ, ಫಿಲಿಪ್ಪೈನ್ ಹನೀ ಬೀ, ರೆಡ್ ಡ್ವಾರ್ಫ್ ಹನೀ ಬೀ ಮತ್ತು ಬ್ಲ್ಯಾಕ್ ಡ್ವಾರ್ಫ್ ಹನೀ ಬೀ ( ಚಿತ್ರ 4 ರಲ್ಲಿ ಕ್ರಮವಾಗಿ ಮೇಲಿಂದ ಕೆಳಕ್ಕೆ)'. ಈ ಎಲ್ಲ ಏಳೂ ಪ್ರಭೇದಗಳ ಜೇನು ನೊಣಗಳು ಬಹು ವರ್ಷ ಬಾಳಬಲ್ಲ ಮೇಣದ ಗೂಡುಗಳನ್ನು ( ಚಿತ್ರ 2) ನಿರ್ಮಿಸುತ್ತವೆ ; ಹತ್ತು ಸಾವಿರದಿಂದ ಐವತ್ತು ಸಾವಿರ ಸಂಖ್ಯೆಯಲ್ಲಿ ಸಂಘ ಜೀವನ ನಡೆಸುತ್ತವೆ; ಗೂಡಿನಲ್ಲಿ ಎಂಟರಿಂದ ಮುವ್ವತ್ತು ಕಿಲೋ ಗ್ರಾಂ ವರೆಗೆ ಜೇನು ಶೇಖರಿಸುತ್ತವೆ !

ವಿಶೇಷ ಏನೆಂದರೆ, ಜೇನು ನೊಣಗಳ ಈ ಏಳೂ ಪ್ರಭೇದಗಳಲ್ಲಿ ಜೇನು ಸಾಕಣೆಯ ವಾಣಿಜ್ಯ ಚಟುವಟಿಕೆಗಳಿಗೆ ಸೂಕ್ತವಾಗಿರುವ ಪ್ರಭೇದಗಳು ನಾಲ್ಕು ಮಾತ್ರ. ಜೈಂಟ್ ಹನೀ ಬೀ, ರೆಡ್ ಡ್ವಾರ್ಫ್ ಮತ್ತು ಬ್ಲ್ಯಾಕ್ ಡ್ವಾರ್ಫ್‌ಗಳು ಕೃತಕ ಜೇನು ಪೆಟ್ಟಿಗೆಗಳಲ್ಲಿ ಗೂಡು ಕಟ್ಟಲು ಒಗ್ಗುವುದಿಲ್ಲ. ಹಾಗಾಗಿ ಜೈಂಟ್ ಹನೀ ಬೀ (ಏಪಿಸ್ ಡಾರ್ಸೆಟಾ) ಯ ಒಂದು ಉಪ ಪ್ರಭೇದವಾದ 'ದಿ ಹಿಮಾಲಯನ್ ಜೈಂಟ್ ಹನೀ ಬೀ' ಅತ್ಯಧಿಕ ಪ್ರಮಾಣದಲ್ಲಿ ಜೇನನ್ನು ಉತ್ಪಾದಿಸುತ್ತದಾದರೂ ಜೇನು ಸಾಕಣೆಗೆ ಅತ್ಯಂತ ವಿಶೇಷವಾಗಿ ವೆಸ್ಟರ್ನ್ ಹನೀ ಬೀ ( ಏಪಿಸ್ ಮೆಲ್ಲಿಫೆರಾ) ಮತ್ತು ಏಷಿಯನ್ ಹನೀ ಬೀ (ಏಪಿಸ್ ಸೆರಾನಾ) ಪ್ರಭೇದಗಳು ಮಾತ್ರ ಬಹಳ ಪ್ರಶಸ್ತ ಎನಿಸಿವೆ.

■ ಎನ್. ವಾಸುದೇವ್